ಇ) ಮಹಾಲಕ್ಷ್ಮಿ ಬಡಾವಣೆಯಲ್ಲಿ ಒಂದು ಹೆಚ್ಚುವರಿ 250 ಕೆ.ವಿ.ಎ. ಸಾಮರ್ಥ್ಯವುಳ್ಳ ಪರಿವರ್ತಕವನ್ನು ಹಾಕಲು ಕೆಲಸ ಪ್ರಾರಂಭಿಸಿದ್ದು, ಪರಿವರ್ತಕವನ್ನು ಅಳವಡಿಸಿದ ನಂತರ ಲೋ ವೋಲ್ಟೇಜ್ ತೊಂದರೆಯು ನಿವಾರಣೆಯಾಗುತ್ತದೆ.

ಈ) ಶ್ರೀಕಂಠೇಶ್ವರ ನಗರದಲ್ಲಿ ಪರಿವರ್ತಕದಿಂದ ಅತ್ಯಂತ ದೂರವಿರುವ ಗ್ರಾಹಕರ ಸ್ಥಾವರಗಳಲ್ಲಿ ವೋಲ್ಟೇಜ್‌ನ್ನು ಅಳತೆ ಮಾಡಿ, ಅದು ಸರಿಯಿರುವುದರಿಂದ ಅಲ್ಲಿ ಲೋ ವೋಲ್ಟೇಜ್ ಸಮಸ್ಯೆ ಇಲ್ಲವೆಂದು ಕಂಡು ಬಂದಿರುತ್ತದೆ.

**ನೌಕರಿ ಆಯ್ಕೆಯಲ್ಲಿ ಗ್ರಾಮಾಂತರ ಮಕ್ಕಳಿಗೆ 15 ಅಂಕಗಳ ಸೇರ್ಪಡೆ**

224 ಸಿ - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯ ಸರ್ಕಾರಿ ನೌಕರಿ ಆಯ್ಕೆಯಲ್ಲಿ ಗ್ರಾಮಾಂತರ ಮಕ್ಕಳಿಗೆ ಪ್ರತಿಶತ 15 ಅಂಕಗಳ ಅಥವಾ 15 ಅಂಕಗಳನ್ನು ಸೇರಿಸಲಾಗುವುದೇ?*

ಆ) *ಅವುಗಳಲ್ಲಿ ಆರೋಗ್ಯ ಇಲಾಖೆಯಲ್ಲಿ ಸಂದರ್ಶನ ಕೊಡುವಾಗ ಯಾವ ರೀತಿ ಪರಿಗಣಿಸಿದೆ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೌದು.

ಗ್ರಾಮಾಂತರ ಅಭ್ಯರ್ಥಿಯು ಪಡೆದ ಒಟ್ಟು ಅಂಕಗಳಿಗೆ 15 ಅಂಕಗಳನ್ನು ಸೇರಿಸಲಾಗುವುದು.

ಆ) ಸೇವಾ ನಿಯಮಾವಳಿಗಳ ಪ್ರಕಾರ ವಿದ್ಯಾರ್ಹತೆಗಳನ್ನು ಪರಿಗಣಿಸಿ ಒಟ್ಟು ಅಂಕಗಳಿಗೆ 15 ಅಂಕಗಳನ್ನು ಕೊಟ್ಟು ಶೇಖಡವಾರು ಮಾಡಿ ಸಂದರ್ಶನವನ್ನು ಕೊಡಲಾಗಿದೆ.

**ತುಮಕೂರು ಜಿಲ್ಲೆಯಲ್ಲಿ ಸಾಕ್ಷರತಾ ಯೋಜನೆ**

227 - ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ತುಮಕೂರು ಜಿಲ್ಲೆಯಲ್ಲಿ ಸಾಕ್ಷರತಾ ಕಾರ್ಯಕ್ರಮದ ಅನುಷ್ಠಾನಕ್ಕೆ ಈವರೆಗೆ ಖರ್ಚು ಮಾಡಿರುವ ಹಣವೆಷ್ಟು?*

ಆ) *ಈ ದಿಸೆಯಲ್ಲಿ ಸಾಧಿಸಿರುವ ಪ್ರಗತಿಗಳೇನು?*

ಇ) *ಯಾವ ಯಾವ ಬಾಬಿಗೆ ಎಷ್ಟು ಹಣ ಖರ್ಚಾಗಿದೆ?*

ಈ) *ಇದರಲ್ಲಿ ಮುದ್ರಣಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 1992 ನವೆಂಬರ್‌ವರೆಗೆ ಒಟ್ಟು ರೂ. 2,37,952.11 ವೆಚ್ಚವಾಗಿರುತ್ತದೆ.

ಆ) ರಾಷ್ಟ್ರೀಯ ಸಾಕ್ಷರತಾ ನಿಯೋಗದ ಮಾರ್ಗ ಸೂಚಿಯನ್ವಯ ದಿನಾಂಕ 24.7.91ರಂದು ತುಮಕೂರು ಜಿಲ್ಲೆಯ ಸಾಕ್ಷರತಾ ಆಂದೋಲನ ಯೋಜನೆಯ ರೂ. 2,57,51,150.00 ಗಳ ಪ್ರಸ್ತಾವನೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿತು. ಈ ದಿಸೆಯಿಂದಾಗಿ ಸಾಕ್ಷರ ಮಿತ್ರ ಎಂಬ ನೊಂದಾಯಿತ ಸಂಸ್ಥೆಯು ಆಸ್ತಿತ್ವಗೊಂಡು ಆಂದೋಲನವನ್ನು ಅನುಷ್ಠಾನಗೊಳಿಸುವ ಹೊಣೆ ಹೊತ್ತಿದೆ. ಈ

ಆಂದೋಲನವು ಜುಲೈ 1991ರಲ್ಲಿ ಪ್ರಾರಂಭವಾಗಿದ್ದು, ಸುಮಾರು 3,27,083 ಅನಕ್ಷರಸ್ಥರನ್ನು ಗುರುತಿಸಲಾಗಿದೆ.

ಆಂದೋಲನದ ಪೂರ್ವಭಾವಿಕಾರ್ಯಗಳಾದ ಕಲಿಕೆಗೆ ವಾತಾವರಣ ನಿರ್ಮಾಣ, ಪ್ರೇರಣೆ, ಗಣತಿ ಕಾರ್ಯಕಲಿಕಾ ಸಂಚಿ, ಕಲಿಕಾ ವಸ್ತು ಸ್ವಯಂ ಸೇವಕರ ಸಂಚಿಗಳ ತಯಾರಿಕೆ ಮೊದಲಾದವುಗಳನ್ನು ಹಮ್ಮಿಕೊಳ್ಳಲಾಗಿದೆ. ಹಾಗೂ ಬೋಧನಾ ಮತ್ತು ಕಲಿಕಾ ಕಾರ್ಯಕ್ರಮಗಳು ನಡೆಯುತ್ತಿವೆ.

ಇ) ಖರ್ಚುನ್ನು ಈ ಕೆಳಕಂಡಂತೆ ಮಾಡಲಾಗಿದೆ

| | | |
|---|---|---|
| 1 | ವಾತಾವರಣ ನಿರ್ಮಾಣ ಪ್ರೇರಣ | 34,85,651.11 |
| 2 | ತರಬೇತಿಗಾಗಿ | 12,03,882.93 |
| 3 | ಅನಕ್ಷರಸ್ಥರಗಣತಿ ಕಾರ್ಯ | 3,19,113.29 |
| 4 | ಕಲಿಕಾ ಸಂಚಿಸ್ವಯಂ ಸೇವಕರ ಸಂಚಿ ಇತ್ಯಾದಿ | 129,09,212.30 |
| 5 | ಆಡಳಿತ ನಿರ್ವಹಣೆ | 15,99,536.21 |
| 6 | ಸಾದಿಲ್ವಾರು ಮೌಲ್ಯಮಾಪನ ಡಾಕ್ಯುಮೆಂಟೇಷನ್ ಇತ್ಯಾದಿ | 42,82,556.27 |
| | ರೂ. | 53,94,750.00 |

**ಅಬಕಾರಿ ಉದ್ಯಮದ ರಾಷ್ಟ್ರೀಕರಣ**

230 - ಶ್ರೀ ವೈ.ಕೆ. ರಾಮಯ್ಯ (ಕುಣಿಕಲ್) : ಮಾನ್ಯ ಮುಖ್ಯಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಕರ್ನಾಟಕ ರಾಜ್ಯದಲ್ಲಿ ಅಬಕಾರಿ ಉದ್ಯಮವನ್ನು ಖಾಸಗಿಯವರಿಗೆ ವಹಿಸಿರುವುದರಿಂದ ಆಗಿರುವ ಅನಾಹುತಗಳು ಸರ್ಕಾರದವರ ಗಮನಕ್ಕೆ ಬಂದಿವೆಯೇ?*

*ಆ) ಈ ಉದ್ಯಮವನ್ನು ಖಾಸಗಿಯವರ ಕೈ ತಪ್ಪಿಸಿ ರಾಷ್ಟ್ರೀಕರಣ ಮಾಡಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೆ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಿ ಮಂತ್ರಿಗಳು) :

ಅ) ಇಲ್ಲಾ

ಆ) ಪ್ರಸಕ್ತದಲ್ಲಿ ಸರ್ಕಾರದ ಮುಂದೆ ಇಂತಹ ಯಾವುದೇ ಪ್ರಸ್ತಾವನೆ ಇಲ್ಲ.

**ರೈತರ ಬೇಸಾಯಕ್ಕೆ ವಿದ್ಯುಚ್ಛಕ್ತಿ**

232 - ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಮುಖ್ಯಿ ಮಂತ್ರಿಗಳು ಈ - ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತುಮಕೂರು ಜಿಲ್ಲೆಯ ರೈತರಿಗೆ ಬೇಸಾಯಕ್ಕೆ ವಿದ್ಯುಚ್ಛಕ್ತಿ ಒದಗಿಸುವಲ್ಲಿ ವಿಫಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

*ಆ) ಈ ವಿಫಲತೆಯಿಂದ ರಾಜ್ಯದ ರೈತರಿಗೆ ಆಗಿರುವ ತೊಂದರೆ ಹಾಗೂ ಬೆಳೆ ಕಳೆದುಕೊಂಡ ರೈತರ ಮಾನಸಿಕ ಯಾತನೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?*

*ಇ) ಬಂದಿದ್ದಲ್ಲಿ ಇದನ್ನು ನಿವಾರಣೆ ಮಾಡಲು ಸರ್ಕಾರ ಕಾರ್ಯಕ್ರಮ ನಿರೂಪಿಸಿ ರೈತರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳುತ್ತಿದೆಯೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಿ ಮಂತ್ರಿಗಳು) :